
# ಜ್ಞಾನಶಕ್ತಿ

## ಮಾಸ ಪತ್ರಿಕೆ

## JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 14 Reg. No. : KARBIL / 2005 / 16123 ಅಕ್ಟೋಬರ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 10 ಪ್ರಕಟಣೆ : 17-10-2025

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ನರಕಾಸುರ ಮೋಕ್ಷ' ಯಕ್ಷಗಾನ

**ಮುಮ್ಮೇಳ ಕಲಾವಿದರು**



ಶ್ರೀಕೃಷ್ಣ : ಕು। ನಂದಿತಾ ಎಸ್. ರಾವ್ | ದೇವೇಂದ್ರ : ಶ್ರೀ ವಲ್ಲೀಶ್ | ಅಗ್ನಿ : ಶ್ರೀ ಶ್ರೀಹರಿ ಆದ್ಯಪಾಡಿ | ಕುಬೇರ : ಕು। ಅಂಕಿತಾಶ್ರೀ | ಸತ್ಯಭಾಮೆ : ಶ್ರೀಮತಿ ಶೈಲಜಾ ಶ್ರೀಕಾಂತ್



ಶಚಿ : ಶ್ರೀ ರಘುವೀರ್ ಪೆರ್ಡೂರು | ದೇವದೂತ : ಶ್ರೀ ಪಿ. ಶ್ರೀಕಾಂತ್ ರಾವ್ | ಜಯಂತ : ಶ್ರೀ ಅನ್ವೇಷ್ ರಾವ್ | ವರುಣ : ಶ್ರೀ ನಾಗರಾಜ ಶರ್ಮ | ಬಲಾಸುರ : ಶ್ರೀ ನಾಗರಾಜ ವಿಟ್ಲ | ವಕ್ರತುಂಡಿ : ಶ್ರೀಮತಿ ಅರುಣಾ ಸೋಮಶೇಖರ್



ನರಕಾಸುರ : ಶ್ರೀ ಸಂಜಯ್ ಕುಮಾರ್ ಪಿ. | ನರಕಾಸುರ : ಶ್ರೀ ನಾಗರಾಜ್ ವರ್ಕಾಡಿ | ಮುರಾಸುರ : ಶ್ರೀ ಉದಯಕುಮಾರ್ ಅಡೂರು | ಮುರಾಸುರ : ಶ್ರೀ ಅನಿಲ್ ನೆಲ್ಲಿಕುಂಜೆ | ಕುಂಭಾಸುರ : ಶ್ರೀ ಪ್ರತೀಕ ಎಲ್ಲಂಗಳ | ರಕ್ಕಸ ದೂತ : ಶ್ರೀ ಶ್ರೀರಾಮ ಎಲ್ಲಂಗಳ

- ನಿರ್ದೇಶಕರು : ಶ್ರೀ ಸಂಜಯ್ ಕುಮಾರ್ ಪಿ.
- ಪ್ರಾಯೋಜಕರು : ಶ್ರೀ ಕೆ. ಸದಾಶಿವ ಶಾಸ್ತ್ರೀ
- ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರು



# ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು**

ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. **25-10-2025**ನೇ ಶನಿವಾರ ಸಂಜೆ ಗಂಟೆ **5-30**ಕ್ಕೆ

## ದೀಪಾವಳಿ ಆಚರಣೆಯನ್ನು

ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ವಿನೋದಾತ್ಮಕ ಆಟಗಳು, ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿನಂತಿಸುತ್ತೇವೆ.

ಆ ದಿನದ ವೆಚ್ಚಗಳ ಬಗ್ಗೆ ಪ್ರಾಯೋಜಕರನ್ನು ಅಪೇಕ್ಷಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ದೀಪಾವಳಿ ಆಚರಣೆಯ ಮಹತ್ವದ ಬಗ್ಗೆ ಉಪನ್ಯಾಸ :
ಶ್ರೀಮತಿ ರತ್ನ ರಾಜೇಂದ್ರ

ಬಹುಮಾನಗಳ ಪ್ರಾಯೋಜಕರು : ಶ್ರೀಮತಿ ಪ್ರಭಾ ಪ್ರಭಾಕರ್ ರಾವ್

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಜನಕರಾಜ್ ✆ : 8494939446
ಶ್ರೀ ರಾಕೇಶ್ ಕುಡುಪು ✆ : 9741041458
ಶ್ರೀಮತಿ ಜಯಂತಿ ವಿನೋದ್ ರಾವ್ ✆ : 9945742680
ಶ್ರೀಮತಿ ಶಕುಂತಲಾ ವಿಜಯಕುಮಾರ್ ✆ : 9481973207

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 ✆ : 9343361618 e-mail : jnanashakthisss@gmail.com


## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 60ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

ಹೆಚ್ಚಿನ ಮಾಹಿತಿಗಾಗಿ

ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 88ನೇ ಮಹಾಸಭೆ




ಮಂಗಳೂರಿನ ಬಿಜೈಯಲ್ಲಿ ಪ್ರಧಾನ ಕಛೇರಿ ಹೊಂದಿರುವ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಮಹಾಸಭೆಯು ಸೆಪ್ಟಂಬರ್ 21ರಂದು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಭವನ'ದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಶ್ರೀ ಕರುಣ್ ರಾವ್ ಬೆಳ್ಳೆಯವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘವು ಪ್ರಸ್ತುತ ಒಟ್ಟು 18 ಶಾಖೆಗಳ ಮೂಲಕ ಸದಸ್ಯರಿಗೆ ಸೇವೆಯನ್ನು ನೀಡುತ್ತಿದ್ದು, ಸಂಘದ 5 ಶಾಖೆಗಳು ಮಹಿಳಾ ಶಾಖಾ ವ್ಯವಸ್ಥಾಪಕರೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಮಹಿಳಾ ಸಬಲೀಕರಣಕ್ಕೆ ಪ್ರಾಶಸ್ತ್ಯ ನೀಡುತ್ತಿದೆ. ವರದಿ ವರ್ಷದಲ್ಲಿ ಒಟ್ಟು ರೂ. 277 ಕೋಟಿ ವ್ಯವಹಾರ ನಡೆಸಿ, ರೂ. 151.30 ಲಕ್ಷ ಲಾಭ ಗಳಿಸಿದೆ. ಲಾಭವನ್ನು ಸಹಕಾರಿ ನಿಯಮದಂತೆ ವಿವಿಧ ವಿಭಾಗದಲ್ಲಿ ಹಂಚಿ, ಈ ಬಾರಿ ಸದಸ್ಯರಿಗೆ ಶೇ. 10 ಡಿವಿಡೆಂಡ್ ನೀಡುವುದಾಗಿ ಅವರು ಘೋಷಣೆ ಮಾಡಿ, ಸಂಘದ ಅಭಿವೃದ್ಧಿಗೆ ಸಹಕರಿಸಿದ ಎಲ್ಲರನ್ನೂ ಅಭಿನಂದಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಾಯಿಪ್ರಸಾದ್ ಎಂ. ಇವರು ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸಿದರು. ಸಂಘದ ಸದಸ್ಯರುಗಳು ವಿವಿಧ ಸಲಹೆ–ಸೂಚನೆಗಳನ್ನು ನೀಡಿದರು. ಆಡಳಿತ ಮಂಡಳಿಯ ನಿರ್ದೇಶಕರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಶ್ರೀಮತಿ ಪುಣ್ಯಶ್ರೀ ಮತ್ತು ತಂಡದವರು ಪ್ರಾರ್ಥಿಸಿ, ಸಂಘದ ನಿರ್ದೇಶಕರಾದ ಶ್ರೀ ಪಿ. ಉದಯ ಕುಮಾರ್ ರಾವ್ ವಂದಿಸಿ, ವಿಟ್ಲ ಶಾಖೆಯ ವ್ಯವಸ್ಥಾಪಕರಾದ ಶ್ರೀ ರಾಜೇಶ್ ಇವರು ನಿರೂಪಿಸಿದರು. ಸಭೆಯ ಮುಂಚಿತವಾಗಿ ವಿವಿಧ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆಯಿತು.


Celebrating 60th Year 1963-2023
RAJESH POWER PRESS
PRINTERS & PUBLISHERS
DARBE - 574 202, PUTTUR, D. K., KARNATAKA
Phone : (08251) 231696, 231697 & 9448481696
E-mail : msraghunathrao@hotmail.com

Prop. : P. Srikanth Rao Mobile : 9343361618
M/s. SAMARPAN
HOUSE OF STATIONERY
"Vijaya Nivas", Opp. Pio Mall
Bejai Church Road, Mangalore - 4

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

ಪತ್ರಿಕೆಗೆ ಶುಭ ಬಯಸುವ–
Dr. Jayalakshmi Devi
Dr. Jaganmohan, Smt. Asha Mohan
Akarsh M. Rao
Konchadi, Mangalore - 575 008

ಪತ್ರಿಕೆಗೆ ಶುಭ ಬಯಸುವ –
ಕೆ. ಆರ್. ಉಪಾಧ್ಯಾಯ
ಮಂಗಳೂರು

## ಬಹುಮುಖೀ ವ್ಯಕ್ತಿತ್ವದ ಪ್ರತಿಭೆ ಶ್ರೀ ವಿಟ್ಲ ನಾಗರಾಜ್ ರಾವ್




ಶ್ರೀಯುತ ವಿಟ್ಲ ನಾಗರಾಜ್ ಇವರು ದಿ| ವಿಟ್ಲ ಲಕ್ಷ್ಮೀನಾರಾಯಣ ರಾವ್ ಮತ್ತು ವನಲಕ್ಷ್ಮೀ ಇವರ ಸುಪುತ್ರರಾಗಿದ್ದು, ಇವರು ಎಂ.ಬಿ.ಎ. ಪದವೀಧರರಾಗಿರುತ್ತಾರೆ. ಪ್ರಸ್ತುತ ಮಂಗಳೂರು ಕೆಮಿಕಲ್ಸ್ & ಫರ್ಟಿಲೈಸರ್ ಕಂಪೆನಿಯಲ್ಲಿ ಮೆಟೀರಿಯಲ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಹುದ್ದೆಯನ್ನು ನಿರ್ವಹಿಸುತ್ತಿದ್ದಾರೆ. ನುರಿತ ವಾಲಿಬಾಲ್ ಆಟಗಾರರಾಗಿದ್ದ ಇವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅನೇಕ ಪ್ರಶಸ್ತಿಗಳನ್ನು ತಂದುಕೊಟ್ಟ ಕೀರ್ತಿ ಇವರದ್ದಾಗಿದೆ. ವೃತ್ತಿಯಲ್ಲಿ ಕಂಪೆನಿಯಲ್ಲಿ ದುಡಿಯುವ ಇವರು ಎಳವೆಯಿಂದಲೇ ಆಧ್ಯಾತ್ಮಿಕದತ್ತ ಆಕರ್ಷಿತರಾಗಿದ್ದರು ಎಂದರೆ ಉತ್ಪ್ರೇಕ್ಷೆಯಲ್ಲ. ಆಟಪಾಠಗಳ ಜೊತೆ ಜೊತೆಗೆ ಇವರನ್ನು ಬಹುವಾಗಿ ಸೆಳೆದದ್ದು ದೇವಸ್ಥಾನದ ದೇವರ ಪ್ರಭಾವಳಿಯನ್ನು ಅಲಂಕರಿಸುವುದು, ದೇಗುಲದ ವೈವಿಧ್ಯಮಯ ಅಲಂಕಾರದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದು, ತಂತ್ರಿಗಳಿಗೆ ಸಹಾಯಕರಾಗಿ ಕೆಲಸ ಮಾಡುವುದು, ಬ್ರಹ್ಮಕಲಶೋತ್ಸವದ ಸಮಯದಲ್ಲಿ ಎಲ್ಲಾ ರೀತಿಯ ಪೂರ್ವಭಾವಿ ತಯಾರಿ ನಡೆಸಿ ತಮ್ಮ ನೈಪುಣ್ಯತೆಯನ್ನು ಮೆರೆದಿದ್ದಾರೆ. ಗ್ರಾಮೀಣ ಕ್ರೀಡಾಕೂಟಗಳ ನಿರ್ವಹಣೆ ಮತ್ತು ನಿರೂಪಕರಾಗಿ ತಮ್ಮ ಕೌಶಲ್ಯದಿಂದ ಜನಪ್ರಿಯರಾಗಿದ್ದಾರೆ. ದೈವ ಹಾಗೂ ದೇವಸ್ಥಾನದ ಕೈಂಕರ್ಯದಲ್ಲಿ ಅನುಭವ ಹೊಂದಿದ್ದು, ವೈದಿಕರ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾ ಹಲವಾರು ದೇವಳಗಳಲ್ಲಿ ಬ್ರಹ್ಮಕಲಶೋತ್ಸವದ ಕಾರ್ಯಗಳು ಇವರ ನೇತೃತ್ವದಲ್ಲಿ ಅಚ್ಚುಕಟ್ಟಾಗಿ ಜರುಗಿದೆ. ಶ್ರೀಯುತರು ಕೂಡುಬೆಟ್ಟು ಶ್ರೀ ಸದಾಶಿವ ದೇವಸ್ಥಾನ, ಶ್ರೀ ಚಂದ್ರಶೇಖರ ದೇವಸ್ಥಾನ ಪಡುಬಿದ್ರೆ, ಶ್ರೀ ರಾಜರಾಜೇಶ್ವರಿ ದೇವಸ್ಥಾನ ಮಠಂತಬೆಟ್ಟು, ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಕೊಕ್ರಾಡಿ, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ, ಕುಂದಾಪುರ ಮುಂತಾದ ದೇವಳಗಳಲ್ಲಿ ಜಾತ್ರೆ ಸಮಯದಲ್ಲಿ ದೇವರನ್ನು ಶಿರದಲ್ಲಿ ಹೊತ್ತು ದೇವವಾಹಕರಾಗಿ ವೈಭವದಿಂದ ನೃತ್ಯವನ್ನು ಮಾಡುವುದರಲ್ಲಿ ಪರಿಣಿತರಾಗಿರುವುದು ನಮ್ಮ ಸ್ಥಾನಿಕ ಸಮಾಜಕ್ಕೆ ಹೆಮ್ಮೆಯ ವಿಷಯ.

ಯಕ್ಷಗಾನದ ವೇಷಧಾರಿಯಾಗಿರುವ ಇವರು ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ, ತಲಪಾಡಿ ಮೇಳದಲ್ಲಿ ದುಡಿದ ಅನುಭವ ಇವರದ್ದಾಗಿದೆ. ಪತ್ನಿ ರಾಧಿಕಾ ಎಸ್.ಡಿ.ಎಂ. ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದಾರೆ. ಮಗಳು ಪಂಚಮಿಯೊಂದಿಗೆ ಸುಖೀ ಸಂಸಾರವನ್ನು ನಡೆಸುವ ಇವರಿಗೆ ದೇವರ ಆಶೀರ್ವಾದ ಸದಾ ಇರಲಿ, ಶ್ರೀಯುತರಿಂದ ದೇವರಸೇವೆ ನಿರಂತರ ಮೂಡಿಬರಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಎಲ್ಲಾ ಸದಸ್ಯರ ಹಾರೈಕೆ.

**PRAVEEN KUMAR ADYAPADY**
**NOTARY & ADVOCATE**

MANGALORE OFFICE
JANVI PLAZA, IInd FLOOR
BUNTS HOSTEL, MANGALORE

BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

We undertakes : Civil, Criminal, Motor Vehicles, A.C., D.C. Cases, Land Conversion, Registration etc.

*Manish Rao U.*
Tel : (O) 2223301
Mobile : 9448726499 / 8884284939

**NAVA COMPUTERS**



Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services

1st Floor, Bharath Building, P. M. Rao Road, Hampankatta, Mangaluru - 575 001

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755
ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ
ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು
✆ : 8904801404
ಮುಲ್ಕಿ : ಮಾತಾ ರೆಸಿಡೆನ್ಸಿ, ಹಳೆಯಂಗಡಿ, ಮುಲ್ಕಿ ✆ : 9980638274

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ-ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

**ನಿಮ್ಮ ಹೂಡಿಕೆಗಳು**
**ಕೇವಲ 88 ತಿಂಗಳಲ್ಲಿ**
**ದ್ವಿಗುಣವಾಗುವುದು**

**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ

**ಲಕ್ಷಾಧೀಶ ಯೋಜನೆ**
**ರೂ. 1,00,000/-**
ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174

**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

## ಪುತ್ತೂರಿನ 'ಶಿವಸದನ'ಕ್ಕೆ ದೇಣಿಗೆ

ಬೆಂಗಳೂರು ನಿವಾಸಿ ಶ್ರೀಮತಿ ಸಂಧ್ಯಾ ಮತ್ತು ಶ್ರೀ ಸನತ್ ಉದ್ಯಾವರ ಇವರು ಶ್ರೀ ಸ್ಕಂದ ಸ್ವಾಮಿ ಮತ್ತು ಶ್ರೀಮತಿ ಶಾಂತಿ ಉದ್ಯಾವರ ಅವರ ಸ್ಮರಣಾರ್ಥ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ರೂ. 50,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಇವರು ಈ ಹಿಂದೆ ರೂ. 1,52,000/– ನೀಡಿದ್ದು ಒಟ್ಟು ಮೊತ್ತ ರೂ. 2,02,000/– ನೀಡಿದಂತಾಗಿದೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.




ಶಿವಸದನ ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯ, ಮುರ, ಪುತ್ತೂರು ಇಲ್ಲಿ ಬೆಂಗಳೂರಿನ ಖ್ಯಾತ ಸರ್ಜನ್ **ಡಾ। ಪಿ. ಎಸ್. ವೆಂಕಟೇಶ್ ರಾವ್** ಮತ್ತು ಪತ್ನಿ **ಶ್ರೀಮತಿ ವಿಜಯಲಕ್ಷ್ಮಿ ರಾವ್** ಪ್ರತಿ ವರ್ಷದಂತೆ ವಿಶೇಷ ಭೋಜನವನ್ನು ಪ್ರಾಯೋಜಿಸಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯಿಂದ ಭಜನಾಸೇವೆ



ಮತಂತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಭಜನಾ ಮಂಡಳಿಯಿಂದ 'ಭಜನಾ ಸೇವೆ' ನವರಾತ್ರಿಯ ಪ್ರಥಮ ದಿನವಾದ ತಾ. 22–9–2025ನೇ ಸೋಮವಾರ ನಡೆಯಿತು. ***ಚಿತ್ರ : ಶ್ರೀ ರಘುವೀರ್ ಪೆರ್ಡೂರು***

## ಅಪಾರಕೀರ್ತಿ ಗಳಿಸಿ



**ವಿಜ್ಞಾನಿ ಶ್ರೀ ಕೃಷ್ಣಮೋಹನ್ ಶಾನುಭಾಗ್** ಇವರು ಇಸ್ರೊ ಬೆಂಗಳೂರು ಮತ್ತು ತುಮಕೂರು ಎಲ್.ಪಿ. ಎಸ್.ಸಿ. ಯೂನಿಟ್ ಉಪ ನಿರ್ದೇಶಕರಾಗಿ ಪದೋನ್ನತಿ ಹೊಂದಿದ್ದಾರೆ.



ಶ್ರೀ ದಾಮೋದರ ಉಬರಳೆ ಮತ್ತು ಶ್ರೀಮತಿ ವಿನುತ ಇವರ ಪುತ್ರ **ಚಿ। ವಿಘ್ನೇಶ ಯು. ರಾವ್** ಜೈನ್ ಯೂನಿವರ್ಸಿಟಿಯ ಎಂ.ಎಸ್.ಸಿ. ಅನಿಮೇಶನ್‌ನಲ್ಲಿ ಸಿ.ಜಿ.ಪಿ.ಎ. 9.51 ಅಂಕಗಳಿಸಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

## ಸಾಲ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಶ್ರೀಮತಿ ಇಂದಿರಾ ರಾವ್ ಮತ್ತು ಉಜ್ಜೋಡಿ ಶ್ರೀ ರಾಮರಾವ್ ಸ್ಮಾರಕ ಸಾಲ ವಿದ್ಯಾರ್ಥಿವೇತನ ನಿಧಿ'ಗೆ ಅವರ ಪುತ್ರ ಶ್ರೀ ಭುಜಂಗ ರಾವ್ ಸೊಸೆ ಶ್ರೀಮತಿ ಸುನಿಲ ಬಿ. ರಾವ್ ರೂ. 10,000/– ನೀಡಿರುವರು. ಮೊದಲು ಈ ನಿಧಿಯನ್ನು ರೂ. 1,15,000/– ನೀಡಿ ಸ್ಥಾಪಿಸಿದ್ದು ಈಗ ಅದರ ಮೊತ್ತವನ್ನು ರೂ. 1,25,000/–ಕ್ಕೆ ಹೆಚ್ಚಿಸಿರುವರು. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

## ವಿದ್ಯಾರ್ಥಿವೇತನ ನಿಧಿಗೆ ಸಹಾಯಹಸ್ತ



ಸುರತ್ಕಲ್ ಖಾನ ನಿವಾಸಿ ಶ್ರೀ ಸದಾನಂದ ರಾವ್ ಬೊಕ್ಕಸ ಮತ್ತು ಪತ್ನಿ ಶ್ರೀಮತಿ ವಾಣಿ ರಾವ್ ತಮ್ಮ ಪುತ್ರನ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸದನದ ವಿದ್ಯಾರ್ಥಿವೇತನ ನಿಧಿಗೆ ರೂ. 5,000/– (ರೂಪ್ಯಾ ಐದು ಸಾವಿರ)ವನ್ನು ನೀಡಿರುವರು. ಇವರು ಸುಮಾರು 15 ವರ್ಷಗಳಿಂದ ಶ್ರೀ ಸಭಾದ ಈ ಕಾರ್ಯಕ್ರಮಕ್ಕೆ ಸಹಕರಿಸುತ್ತಿರುವರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು.

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು




ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

Prop: Somashekhar
Mob: 9844551244
WC EVENT PLANNERS
+91 98445 51244
**WONDER CREATION**
Decor & Event planners
Our Services :-
- Corporate Events
- All Types Of Stage Decoration
- Sounds And Lights
- Led Wall Rentals
- Selfie Booth Concept
- Shamiyana/Tint Sheet/Plat Form Chairs/Round Table etc....
- Photography & Videography
2T-145-3A, Kulai Gudde Road, Kulai, Surathkal

# ಶ್ರೀ ನರೇಂದ್ರ ಮೋದಿಜಿಯವರ ಹುಟ್ಟುಹಬ್ಬದ ಪ್ರಯುಕ್ತ - 'ಶಿವಸದನ'ಕ್ಕೆ ಹಣ್ಣು ಹಂಪಲು ವಿತರಣೆ



ಪುತ್ತೂರು ಬಿಜೆಪಿ ನಗರ ಮಂಡಳಿ ಹಾಗೂ ಮೋದಿ ಅಭಿಮಾನಿಗಳು ನಮ್ಮ ನೆಚ್ಚಿನ ಪ್ರಧಾನಿ ಶ್ರೀ ನರೇಂದ್ರ ಮೋದೀಜಿಯವರ ಹುಟ್ಟುಹಬ್ಬದ ಅಂಗವಾಗಿ ಅವರ ಆರೋಗ್ಯ, ಆಯಸ್ಸು ಹಾಗೂ ಸಮರ್ಥವಾಗಿ ಇನ್ನೂ ಹಲವು ವರ್ಷ ನಮ್ಮ ದೇಶವನ್ನು ಇನ್ನೂ ಉತ್ತುಂಗಕ್ಕೆ ಕೊಂಡುಹೋಗಿ ಭಾರತವನ್ನು ವಿಶ್ವಗುರು ಮಾಡುವ ಅವರ ದೃಢಸಂಕಲ್ಪ ನಮ್ಮ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ ಮುರ, ಪುತ್ತೂರು ಎಲ್ಲರ ಆಶೀರ್ವಾದ ಮೋದೀಜಿಯ ಮೇಲೆ ಇರಲಿ ಎಂದು ಹಣ್ಣುಹಂಪಲನ್ನು ಸಂಘದ ಅಧ್ಯಕ್ಷರು, ಶ್ರೀ ಪ್ರಸನ್ನ ಕುಮಾರ್, ಪದಾಧಿಕಾರಿಗಳು ಆಗಮಿಸಿ ವಿತರಿಸಿದರು. ಇನ್ನು ಮುಂದೆಯೂ ಶಿವಸದನಕ್ಕೆ ಬರುವ ಆಶಯವನ್ನು ವ್ಯಕ್ತಪಡಿಸಿರುವರು. ಅವರಿಗೆ ಶಿವಸದನದ ಪರವಾಗಿ ಅನಂತ ಧನ್ಯವಾದಗಳು.

*ವರದಿ : ಶ್ರೀಮತಿ ಸುಮಂಗಲ ಪ್ರಭಾಕರ್*

# ಪಡುಮಲೆ ಮದಕ ಶ್ರೀ ರಾಜರಾಜೇಶ್ವರಿ ದೇವಿಗೆ ಕಂಚಿನ ಪ್ರಭಾವಳಿ ಸಮರ್ಪಣೆ



ಪುತ್ತೂರು ತಾಲೂಕು ಇತಿಹಾಸ ಪ್ರಸಿದ್ಧ ಪಡುಮಲೆಯ ಮದಕ ಶ್ರೀ ರಾಜರಾಜೇಶ್ವರಿ ದೇವಿಗೆ ಶ್ರೀಮತಿ ರಮಾದೇವಿ ಮತ್ತು ಶ್ರೀ ಲಕ್ಷ್ಮೀನಾರಾಯಣ ರಾವ್ ಪಡುಮಲೆ (ಮಂಗಳೂರು) ಇವರು ಸುಮಾರು 35 ಸಾವಿರ ವೆಚ್ಚದ ಕಂಚಿನ ಪ್ರಭಾವಳಿ ನವರಾತ್ರಿಯ ಲಲಿತಾ ಪಂಚಮಿಯ ದಿನದಂದು ದೇವರಿಗೆ ಸಮರ್ಪಣೆ ಮಾಡಿದರು.

ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನದ ಪ್ರಧಾನ ಅರ್ಚಕರು ವಿಶೇಷ ಪ್ರಾರ್ಥನೆ ನಡೆಸಿದರು. ಮನೆಯವರು ಶಾಂತ ಕುಮಾರಿ, ಶ್ರೀ ಮನೋಜ್ ಕುಮಾರ್ ಪಡುಮಲೆ ಮತ್ತು ಶರನ್ನವರಾತ್ರಿ ಸಮಿತಿ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಪುತ್ತೂರಿನ 'ಶಿವಸದನ'ಕ್ಕೆ 'ಶ್ರೀ ಶಾರದಾನುಗ್ರಹ' ಪ್ರಶಸ್ತಿ



ಉಡುಪಿಯ ಶಾರದಾ ಮಂಟಪದಿಂದ 'ಸಮಾಜ ಸೇವೆ'ಗಾಗಿ ಪುತ್ತೂರಿನ ಸುಬ್ರಹ್ಮಣ್ಯ ಸಭಾ ಆಡಳಿತದ 'ಶಿವಸದನ'ಕ್ಕೆ ದೊರೆತ 'ಶ್ರೀ ಶಾರದಾನುಗ್ರಹ' ಪ್ರಶಸ್ತಿಯೊಂದಿಗೆ ಗೌರವಧನ ರೂ. 10,000/– ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಯಿತು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

# ಪುತ್ತೂರಿನ 'ಶಿವಸದನ'ಕ್ಕೆ ವಾಷಿಂಗ್ ಮೆಶಿನ್ ಕೊಡುಗೆ



ದಕ್ಷಿಣ ಕನ್ನಡ ಅಟೋಮೊಬೈಲ್ ಮತ್ತು ಟಯರ್ ಡೀಲರ್ಸ್ ಎಸೋಸಿಯೇಶನ್ ವತಿಯಿಂದ ಅದರ ಉಪಾಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಕಾರ್ಯದರ್ಶಿ ಶ್ರೀ ವಿಲಾಸ್ ಕುಮಾರ್, ನಿರ್ದೇಶಕರಾದ ಶ್ರೀ ಅನಿಲ್ ಕುಮಾರ್ ಬಿ.ಎಸ್. ಮತ್ತು ಶ್ರೀ ಲಕ್ಷ್ಮೀನಾರಾಯಣ ನಾಯ್ಕ್ ಇವರು ಪುತ್ತೂರಿನ ವಿಶೇಷ ಚೇತನರ ವಸತಿ ನಿಲಯ ಶಿವಸದನಕ್ಕೆ ಅತಿ ಅಗತ್ಯವಿದ್ದ ವಾಷಿಂಗ್ ಮೆಶಿನ್ ಅನ್ನು ಕೊಡುಗೆಯಾಗಿ ನೀಡಿದರು. ಶಿವಸದನ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರು ಅದನ್ನು ಸ್ವೀಕರಿಸಿದರು.

ಕೊಡುಗೆಯನ್ನು ನೀಡಿದ ಸಂಸ್ಥೆಗೆ, ಅದರ ಪದಾಧಿಕಾರಿಗಳಿಗೂ, ಎಲ್ಲಾ ಸದಸ್ಯರಿಗೂ ಶಿವಸದನದ ವಿಶೇಷ ಚೇತನರ ಶಾಲೆಯ ವತಿಯಿಂದ ಧನ್ಯವಾದಗಳು.

Phone : 0824 - 2440110, 2213946

**VISHRAM MOTORS (P.) LTD.**

**No. 4, Kodialbail Church Building**

**K. S. Rao Road, MANGALORE - 575 003**

***Authorised Dealers for :***

**Vijai Super GP 150 &**

**Vikram 3 Wheelers (Petrol & Diesel)**



**PREETHIKA AUTOMOBILES**

✆ 2493633 9845851573

*Wholesale & Retail Dealers in :*

***2 & 3 WHEELERS, SPARES & ACCESSORIES***

**KARANGALPADY, MANGALORE - 575 003**

***Dealers in :***

**Minda Switches, M. K. Products, Swiss Auto Products, Power Coils**

# ವಾರ್ಷಿಕ ಸ್ಥಾನಿಕ ಸಮಾವೇಶ - ಇಂಡಿಯಾನಾಪೊಲಿಸ್ 2025

ಕಳೆದ ಮೂರು ವರ್ಷಗಳಿಂದ ಮಧ್ಯ ಅಮೇರಿಕಾದ ಸ್ಥಾನಿಕರು ಆಯೋಜಿಸುತ್ತಿರುವ ವಾರ್ಷಿಕ ಸಮಾವೇಶವು ಈ ಬಾರಿ ಜುಲೈ 12, 2025ರಂದು ಇಂಡಿಯಾನಾ ರಾಜ್ಯದ ಇಂಡಿಯಾನಾಪೊಲಿಸ್ ನಗರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಈ ಸಮಾವೇಶದಲ್ಲಿ ಇಂಡಿಯಾನಾ, ಮಿಶಿಗನ್, ಶಿಕಾಗೋ ಹಾಗೂ ನಾರ್ತ್ ಕ್ಯಾರೋಲಿನಾದಿಂದ ಬಂದಿರುವ ಕುಟುಂಬಗಳು ಭಾಗವಹಿಸಿದ್ದರು. ಬಂಧುಗಳು ಕುಟುಂಬಸಮೇತರಾಗಿ ಸೇರಿಕೊಂಡ ಕಾರಣ ಕಾರ್ಯಕ್ರಮವು ಇನ್ನಷ್ಟು ಹೃದಯಸ್ಪರ್ಶಿಯಾಗಿ ವಿಜೃಂಭಣೆಯಿಂದ ನೆರವೇರಿತು.



ಶುಕ್ರವಾರ ಸಂಜೆ ಎಲ್ಲ ಕುಟುಂಬಗಳು ಶ್ರೀ ಸುಧೀರ್ ಏರಿಕ್ಕಳ ಮತ್ತು ಶ್ರೀಮತಿ ಭವ್ಯ ಸುಧೀರ್ ಅವರ ಮನೆಯಲ್ಲಿ ಒಂದಾಗಿ ಸೇರಿದರು. ಅಂದು ರಾತ್ರಿ ಊಟಕ್ಕೆ ಪುಳಿಯೋಗರೆ, ರಸಂ ಮತ್ತು ಪಿಜ್ಜಾ ವಿಶೇಷವಾಗಿ ಸಿದ್ಧವಾಗಿತ್ತು. ಅನೌಪಚಾರಿಕ ಮಾತುಕತೆ ಹಾಗೂ ಊಟದ ಮೂಲಕ ಕಾರ್ಯಕ್ರಮಕ್ಕೆ ಸಕಾಲಿಕ ಚಾಲನೆ ದೊರಕಿತು.

ಶನಿವಾರ ಬೆಳಗ್ಗೆ ಎಲ್ಲರಿಗೂ ಶ್ಯಾವಿಗೆಬಾತ್, ವಡೆ, ಚಹಾ ಮತ್ತು ಕಾಫಿ ಉಪಾಹಾರ ನೀಡಲಾಯಿತು. ಬೆಳಗ್ಗೆ ಗಂಟೆ 11:00ಕ್ಕೆ ಎಲ್ಲರೂ ಉದ್ಯಾನದಲ್ಲಿ ಸೇರಿಕೊಂಡರು. ಅಲ್ಲಿ ಪರಸ್ಪರ ಪರಿಚಯ, ಮಾತುಕತೆ ಮತ್ತು ಹಳೆಯ ನೆನಪುಗಳನ್ನು ಹಂಚಿಕೊಂಡರು.

ಒಟ್ಟು 40ಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಆಟ–ಮನರಂಜನೆಗಾಗಿ ರಿತ್ವಿಕ್ ಹಲವು ಆಟಗಳನ್ನು ಆಯೋಜಿಸಿದರು. ಜೋಡಿ ಆಟಗಳು, ಬಿಂಗೋ ಮತ್ತು ಇತರ ಚಟುವಟಿಕೆಗಳು ಎಲ್ಲರಿಗೂ ಹಾಸ್ಯ–ಹರ್ಷವನ್ನು ತುಂಬಿಸಿದವು.

ಮಧ್ಯಾಹ್ನ ಎಲ್ಲರಿಗೂ ವಿಶೇಷ ವನಭೋಜನ ಏರ್ಪಡಿಸಲಾಗಿತ್ತು. ಚಪಾತಿ, ಪಲ್ಯ, ಪುಲಾವ್, ಜಾಮೂನು, ಬಾಳೆಹಣ್ಣು ಹಲ್ವಾ, ಗೋಬಿ, ರಸಂ, ಮೊಸರನ್ನ, ಹಣ್ಣುಗಳು ಮತ್ತು ಐಸ್‌ಕ್ರೀಮ್ ಸೇರಿ ಊಟವು ತುಂಬಾ ರುಚಿಕರವಾಗಿತ್ತು. ಊಟದ ಅನಂತರ ಮಕ್ಕಳು ಆಟಗಳಲ್ಲಿ ತೊಡಗಿಸಿಕೊಂಡರೆ, ದೊಡ್ಡವರು ಮಾತುಕತೆಯನ್ನು ಮುಂದುವರಿಸಿದರು.

ಅದಾದ ಬಳಿಕ 'ಸ್ಥಾನಿಕರು' ಯಾರು, ಈ ಸಮಾವೇಶವನ್ನು ಏಕೆ ಮಾಡಲಾಗುತ್ತಿದೆ ಎಂಬ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಸ್ಥಾನಿಕರ ಕುರಿತು ಡಾ. ನಾಗಭೂಷಣ್ ಮೂಲ್ಕಿ ಅವರು ಸವಿಸ್ತಾರವಾಗಿ ವಿವರಿಸಿದರು. ಅಮೇರಿಕಾದಲ್ಲಿರುವ ಎಲ್ಲ ಸ್ಥಾನಿಕರು ಒಟ್ಟಾಗಿ ಸಂಪರ್ಕದಲ್ಲಿರಲು, ಕುಟುಂಬ ಪರಂಪರೆ ಮತ್ತು ಮೂಲಗಳನ್ನು ಅರಿತುಕೊಳ್ಳಲು ಈ ಸಮಾವೇಶ ಮಹತ್ವದ ಉತ್ತಮ ವೇದಿಕೆ ಎಂದು ಎಲ್ಲರೂ ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಶ್ರೀಮತಿ ಉಷಾ ಕೋಲ್ಪೆ ಅವರು ಹೃತ್ಪೂರ್ವಕ ವಂದನಾರ್ಪಣೆ ಸಲ್ಲಿಸಿ, ಎಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದರು.

ಸಮಾವೇಶದ ಸಂಘಟನೆ ಮತ್ತು ನಿರ್ವಹಣೆಯನ್ನು ಶ್ರೀ ಸುಧೀರ್ ಏರಿಕ್ಕಳ ಮತ್ತು ಶ್ರೀಮತಿ ಭವ್ಯ ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಮಾವೇಶ ಯಶಸ್ವಿಯಾಗಲು ಶ್ರೀ ಸಿದ್ದೇಶ್ ಮತ್ತು ಚೈತ್ರ ಅವರು ಎಲ್ಲಾ ರೀತಿಯ ಸಹಕಾರ ನೀಡಿದರು.

ಸಂಜೆ ವೇಳೆಗೆ ಎಲ್ಲರೂ ಮತ್ತೆ ಶ್ರೀ ಸುಧೀರ್ ಏರಿಕ್ಕಳ ಅವರ ಮನೆಯಲ್ಲಿ ಸೇರಿದರು. ಅಲ್ಲಿ ಕಾಫಿ, ಚಹಾ ಮತ್ತು ಬೇಲ್‌ಪೂರಿ ಸವಿದು ಮಾತುಕತೆ ಮುಂದುವರಿದಿತು. ಮಕ್ಕಳು ಆಟವಾಡುತ್ತಿದ್ದರೆ, ಹಿರಿಯರು ಉಲ್ಲಾಸಭರಿತರಾಗಿ ಹಾಸ್ಯಗಳೊಂದಿಗೆ ದಿನವನ್ನು ಇನ್ನಷ್ಟು ಹಸನುಗೊಳಿಸಿದರು.

ಭಾನುವಾರ ಬೆಳಿಗ್ಗೆ ಎಲ್ಲರೂ ಸುಂದರ ನೆನಪುಗಳನ್ನು ತಮ್ಮ ಮನದಾಳದಲ್ಲಿ ಉಳಿಸಿಕೊಂಡು ತಮ್ಮ ತಮ್ಮ ಮನೆಗಳತ್ತ ಹಿಂತಿರುಗಿದರು. ಈ ಸಮಾವೇಶವು ಎಲ್ಲರಿಗೂ ಹೊಸ ಶಕ್ತಿ, ಹೊಸ ನೆನಪು ಮತ್ತು ಒಗ್ಗಟ್ಟಿನ ಸಂತೋಷವನ್ನು ನೀಡಿದ್ದು, ಮುಂದಿನ ವರ್ಷವೂ ಇದೇ ರೀತಿಯಾಗಿ ಇನ್ನಷ್ಟು ಕುಟುಂಬಗಳೊಂದಿಗೆ ಮತ್ತೆ ಸೇರಬೇಕೆಂದು ಎಲ್ಲರೂ ನಿರ್ಧರಿಸಿದರು.

Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building Opp. Busstand
Nr. Postoffice, Padubidri - 574 111 Belman
All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ–
ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ಧೃತಿ ಮತ್ತು ಧ್ರುವ್

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

NAVADURGA FINANCIALS
Estd 1998
SCAN ME TO KNOW MORE!!!

M.Devanand bhat
Mob: 9845644556
9663993883
Shobha Digital STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ನಾಡಹಬ್ಬ' ಆಚರಣೆ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ದಸರಾ ನಾಡಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ವಿವಿಧ ಪಾರಾಯಣಗಳು ನಡೆದವು. ಬಳಿಕ ಸುಗಮ ಸಂಗೀತ ಸ್ಪರ್ಧೆ, ಚಿತ್ರ ಬಿಡಿಸುವ ಸ್ಪರ್ಧೆ, ಹುಲಿಕುಣಿತ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆದವು. ಶ್ರೀ ಸಭಾದ ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಕಾರ್ತಿಕ್ ಕುಡುಪು, ಶ್ರೀ ವರುಣ್ ಕೇದಿಗೆ, ಶ್ರೀಮತಿ ಸುಜಾತಾ ಬೆಳ್ಳೆ, ಶ್ರೀಮತಿ ಸುಚಿತ್ರಾ ಶ್ರೀಪತಿ ರಾವ್, ಶ್ರೀ ವಿನೋದ್ ರಾವ್, ಶ್ರೀ ಸುಬ್ರಹ್ಮಣ್ಯ ಸಭಾ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲ ಪ್ರಭಾಕರ್ ತೀರ್ಪುಗಾರರಾಗಿ ಸಹಕರಿಸಿದರು. ಶ್ರೀ ನಾಗರಾಜ್ ವಿಟ್ಲ ಮತ್ತು ಋಷಬ್ ರಾವ್ ಇವರನ್ನು ಶ್ರೀ ಸಭಾ ವತಿಯಿಂದ ಸನ್ಮಾನಿಸಲಾಯಿತು. ಬಳಿಕ ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನ ವತಿಯಿಂದ ಪ್ರತಿಭಾ ಪುರಸ್ಕಾರ ನಡೆಯಿತು. ಭೋಜನದ ಬಳಿಕ ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿಯ ವತಿಯಿಂದ ಶ್ರೀ ಸಂಜಯ್ ಕುಮಾರ ಪಲಿಮಾರ್ ನಿರ್ದೇಶನದ 'ನರಕಕಾಸುರ ಮೋಕ್ಷ' ಯಕ್ಷಗಾನ ಪ್ರದರ್ಶಿಸಲಾಯಿತು. ಭಾಗವತರಾಗಿ ಶ್ರೀ ಅಶ್ವತ್ಥನಾರಾಯಣ ಮತ್ತು ಮದ್ದಳೆ : ಶ್ರೀ ರವಿಕಿರಣ್ ಕಾವೂರು ಹಾಗೂ ಯಕ್ಷಗಾನದ ಖರ್ಚನ್ನು ಶ್ರೀ ಕೆ. ಸದಾಶಿವ ಶಾಸ್ತ್ರೀ ಪ್ರಾಯೋಜಿಸಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ ಡಾ। ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಉದಯಕುಮಾರ್ ಪಿ., ಜೊತೆ ಕಾರ್ಯದರ್ಶಿಗಳಾದ ಶ್ರೀ ಚೇತನ್ ಶರ್ಮಾ, ಶ್ರೀ ಸಂತೋಷ್ ಕುಮಾರ್, ಯುವವೇದಿಕೆ ಅಧ್ಯಕ್ಷ ಶ್ರೀ ಜನಕರಾಜ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಜಯಂತಿ



ವಿನೋದ್ ರಾವ್, ಉಪಾಧ್ಯಕ್ಷೆ ಶ್ರೀಮತಿ ವೀಣಾ ಬೆಳ್ಳೆ, ಕಾರ್ಯದರ್ಶಿ ಶ್ರೀಮತಿ ಶಕುಂತಲಾ ವಿಜಯ ಕುಮಾರ್ ವ್ಯವಸ್ಥೆಯಲ್ಲಿ ಸಹಕರಿಸಿದರು. ಬಹುಮಾನಗಳನ್ನು ಡಾ. ಜಯಲಕ್ಷ್ಮೀ ಪ್ರಾಯೋಜಿಸಿದರೆ, ಶ್ರೀ ಸಭಾ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಕಾರ್ಯಕ್ರಮದ ವಿಡಿಯೋ, ಫೋಟೋಗಳನ್ನು ಒದಗಿಸಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಮಹಿಳಾ ವೇದಿಕೆ ಉಪಾಧ್ಯಕ್ಷೆ ಶ್ರೀಮತಿ ಪುಷ್ಪಾ ಶ್ರೀನಿವಾಸ್ ಧನ್ಯವಾದ ಅರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರು***

# ಅಳಿದ ನಮ್ಮನೆ... ಇಲ್ಲಿರುವುದು ಸುಮ್ಮನೆ...




**ಕಾಂತಾವರ ಪ್ರಭಾಕರ ರಾವ್** (71) ತಾ. 11-10-2025ನೇ ಶನಿವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಯೂನಿಯನ್ ಬ್ಯಾಂಕ್ ನಿವೃತ್ತ ಉದ್ಯೋಗಿ ಶ್ರೀಮತಿ ಪ್ರಭಾ ಪ್ರಭಾಕರ್, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ. ಮಂಗಳೂರಿನ ಪ್ರಖ್ಯಾತ M.C.F. ಸಂಸ್ಥೆಯ ಮಾಜಿ ಆಡಳಿತ ನಿರ್ದೇಶಕರಾಗಿದ್ದ ಅವರು ನಿವೃತ್ತಿಯ ಬಳಿಕ ಹಲವು ಸಂಸ್ಥೆಗಳಲ್ಲಿ ತಾಂತ್ರಿಕ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಕೊಡುಗೈದಾನಿಗಳಾದ ಅವರು ಹಲವಾರು ದೇವಸ್ಥಾನಗಳು, ಸಂಘ-ಸಂಸ್ಥೆಗಳ ಉನ್ನತಿಗೆ ಕಾರಣಕರ್ತರಾಗಿದ್ದರು. ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾಗಿ ಮಂಗಳೂರಿನ ಸಭಾಂಗಣದ ನೆಲಅಂತಸ್ತು, ಪುತ್ತೂರಿನ ಶಿವಸದನ, ಪೊಳಲಿ ನಿವೇಶನ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದು, ಸೇವೆ ಸಲ್ಲಿಸಿದ್ದರು. ಅವರಿಗೆ ಸದ್ಗತಿ ಪ್ರಾಪ್ತಿಯಾಗಲಿ ಮತ್ತು ಅವರ ಕುಟುಂಬಕ್ಕೆ ದುಃಖವನ್ನು ಸಹಿಸುವ ಶಕ್ತಿ ದೇವರು ನೀಡಲಿ ಎಂಬುದು ಶ್ರೀ ಸುಬ್ರಹ್ಮಣ್ಯ ಸಭಾದ ಪ್ರಾರ್ಥನೆ.

— — — — — — — —



**ಕೆಡೆಂಜಿ ಸದಾಶಿವ ಶಾಸ್ತ್ರಿ** ಇವರು ಅಲ್ಪಕಾಲದ ಅನಾರೋಗ್ಯದಿಂದ ತಾ. 8-10-2025ನೇ ಬುಧವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರನನ್ನು ಅಗಲಿದ್ದಾರೆ. ತಮ್ಮ ನೇರ ಮಾತಿನಿಂದ ಗುರುತಿಸಿ ಕೊಂಡಿದ್ದ ಅವರು ಹಲವಾರು ವರ್ಷಗಳಿಂದ ಶ್ರೀ ಸುಬ್ರಹ್ಮಣ್ಯ ಸಭಾದ ನಾಡಹಬ್ಬದಂದು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕನಿಷ್ಠ 40 ಸ್ಥಾನಿಕ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಜೊತೆಗೆ ಸನ್ಮಾನಿಸುವ ಸಾರ್ಥಕ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಪ್ರತಿಮ ವಿದ್ಯಾಪ್ರೇಮಿಯಾಗಿದ್ದರು. ಕೇವಲ 3 ದಿನಗಳ ಹಿಂದೆ ನಡೆದ ಶ್ರೀ ಸಭಾದಲ್ಲಿ ನಡೆದ ನಾಡಹಬ್ಬ ಕಾರ್ಯಕ್ರಮದಲ್ಲಿ ಲವಲವಿಕೆಯಿಂದ ಓಡಾಡಿ ಕಾರ್ಯಕ್ರಮ ನಡೆಸಿ ಕೊಟ್ಟಿದ್ದರು. ತಮ್ಮ ವಿಶೇಷ ದಿನಗಳಂದು ಭಜನಾ, ಯಕ್ಷಗಾನ ಕಲಾವಿದರು, ವಿಶೇಷ ಬಾಲಪ್ರತಿಭೆಗಳಿಗೆ, ವೇದ ಸೂಕ್ತ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ, ವೇದ ಪುರೋಹಿತರಿಗೆ ಸನ್ಮಾನಿಸುವ ಪರಂಪರೆ ಹೊಂದಿದ್ದರು. ಇವರ ಆಕಸ್ಮಿಕ ನಿಧನ ಶ್ರೀ ಸಭಾದ ಸರ್ವಸದಸ್ಯರನ್ನು ದಂಗುಬಡಿಸಿದ್ದು, ಅವರಿಗೆ ಸದ್ಗತಿ ಪ್ರಾಪ್ತಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

— — — — — — — —



ಉಡುಪಿ ನಿವಾಸಿ **ಯು. ಅರವಿಂದ್ ಕುಮಾರ್** (ಕರಂಬಳ್ಳಿ) ಸ್ವಗೃಹದಲ್ಲಿ ತಾ. 10-10-2025ನೇ ಶುಕ್ರವಾರ ದೈವಾಧೀನರಾದರು. ಮೃತರು ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಕಾರ್ಯದರ್ಶಿ, ಹಲವಾರು ವರ್ಷಗಳ ಕಾಲ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು ಹಾಗೂ ಪ್ರಸ್ತುತ ಶ್ರೀ ಶಾರದಾ ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾಗಿದ್ದರು. ಪ್ರತಿಷ್ಠಿತ ಮಣಿಪಾಲ ಕೆ.ಎಂ.ಸಿ.ಯ ರೇಡಿಯಾಲಜಿಸ್ಟ್ ಆಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಓರ್ವ ಮಗ, ಮಗಳು ಹಾಗೂ ಅಪಾರ ಸಂಖ್ಯೆಯ ಬಂಧು-ಬಾಂಧವರನ್ನು ಅಗಲಿದ್ದಾರೆ.



ಬೆಂಗಳೂರಿನ ಶ್ರೀ ಯಂ. ಯಸ್. ರಾಧಾಕೃಷ್ಣ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಮಂಜುಳ** ಇವರು ತಾ. 21-09-2025ನೇ ಭಾನುವಾರ ನಿಧನರಾದರು. ಇವರು ಪತಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರನ್ನು ಅಗಲಿದ್ದಾರೆ.

— — — — — — — —



ಕೊಕ್ರಾಡಿ ಅರುಣೋದಯ ನಿವಾಸಿ ದಿ। ಗೋವಿಂದರಾಯರ ಧರ್ಮಪತ್ನಿ **ಶ್ರೀಮತಿ ಸತ್ಯಭಾಮ ರಾವ್** (93) ಇವರು ತಾ. 17-09-2025ನೇ ಬುಧವಾರ ನಿಧನರಾದರು. ಇವರು ಇಬ್ಬರು ಪುತ್ರರು, ನಾಲ್ಕು ಪುತ್ರಿಯರು ಹಾಗೂ ಬಂಧು-ಮಿತ್ರರನ್ನು ಅಗಲಿದ್ದಾರೆ.

— — — — — — — —



**ಶ್ರೀ ರಮೇಶ ರಾವ್ ಮಸ್ಕಿಬೈಲ್ ಬಾರಕೂರು** (85 ವರ್ಷ) ತಾ. 2-10-2025ನೇ ಗುರುವಾರ ನಿಧನರಾದರು. ಇವರು ಬಂಧು-ಮಿತ್ರರನ್ನು ಅಗಲಿದ್ದಾರೆ.

— — — — — — — —



**ಶ್ರೀಮತಿ ಸುನಂದಾ ಜಿ. ಕೆ. ರಾವ್** (75) ಉಡುಪಿಯಲ್ಲಿ ತಾ. 7-10-2025ನೇ ಮಂಗಳವಾರ ನಿಧನರಾದರು. ಇವರು ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — — — — —



ಬಾರಕೂರು ದಿ। ವೆಂಕಟ್ರಾವ್ ಅವರ ಪತ್ನಿ **ಶ್ರೀಮತಿ ಲೀಲಾವತಿ ಅಮ್ಮ** (95) ನಿಧನರಾದರು. ಅವರು ಇಬ್ಬರು ಪುತ್ರಿಯರನ್ನು ಮತ್ತು ಆರು ಪುತ್ರರನ್ನು ಅಗಲಿರುತ್ತಾರೆ.

— — — — — — — —



**ಕೊಡಿಪಾಡಿ ಭಾಸ್ಕರ ರಾವ್** (79) ತಾ. 30-9-2025ನೇ ಮಂಗಳವಾರ ನಿಧನರಾದರು. ಅವರು ಪತ್ನಿ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — — — — —



ಶ್ರೀ ಶಂಕರ ಪ್ರತಿಷ್ಠಾನ, ಕಾರ್ಕಳ ಇದರ ಸದಸ್ಯರಾಗಿದ್ದು, ದಿ। ಐ. ಕೆ. ಕೃತ್ತಿವಾಸ ಶರ್ಮ ಮತ್ತು ಶ್ರೀಮತಿ ಐ. ಕೆ. ಪ್ರಭಾವತಿ ಇವರ ಪುತ್ರಿಯಾದ **ಶ್ರೀಮತಿ ಐ. ಕೆ. ರಾಜೇಶ್ವರಿ ರಾವ್** (52) ತಾ. 30-9-2025ನೇ ಮಂಗಳವಾರ ನಿಧನರಾದರು. ಅವರು ತಾಯಿ, ಮಗಳು, ಸಹೋದರರು ಹಾಗೂ ಬಂಧು-ಮಿತ್ರರನ್ನು ಅಗಲಿರುತ್ತಾರೆ.

— — — — — — — —



**ಬಿ. ವಿ. ದಿವಾಕರ್ ರಾವ್** (77) ತಾ. 23-9-2025ನೇ ಮಂಗಳವಾರ ಮುಂಬಯಿಯಲ್ಲಿ ನಿಧನರಾದರು. ಅವರು ಓರ್ವ ಪುತ್ರಿಯನ್ನು ಅಗಲಿದ್ದಾರೆ.

— — — — — — — —



ಧರ್ಮಸ್ಥಳದಲ್ಲಿರುವ **ಮಾರ್ಪಳ್ಳಿ ಸುರೇಶ್ ರಾವ್** (70) ಇವರು ತಾ. 9-10-2025ನೇ ಗುರುವಾರ ನಿಧನರಾದರು. ಇವರು ಹವ್ಯಾಸಿ ಯಕ್ಷಗಾನ ಕಲಾವಿದರಾಗಿದ್ದು, ಧರ್ಮಸ್ಥಳ ದೇವಸ್ಥಾನದಲ್ಲಿ ಉದ್ಯೋಗಿ ಯಾಗಿದ್ದರು. ಇವರು ಪತ್ನಿ, ಓರ್ವ ಪುತ್ರ, ಪುತ್ರಿ, ಮೊಮ್ಮಕ್ಕಳನ್ನು ಅಗಲಿದ್ದಾರೆ.

# ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿ ನಿಲಯ 'ಶಿವಸದನ'ಕ್ಕೆ ದೇಣಿಗೆ



ಮೈಸೂರು ನಿವಾಸಿಯಾಗಿದ್ದ ಶ್ಯಾಮಲಾ ಮತ್ತು ಬೆಳ್ಳೆ ದಿನೇಶ್ ರಾವ್ ಇವರ ಸ್ಮರಣಾರ್ಥ ಅವರ ಪುತ್ರ ಶ್ರೀ ದೀಪಕ್ ಬೆಳ್ಳೆ, ಸೊಸೆ ಶ್ರೀಮತಿ ಮೇಧಿನಿ ದೇವದಾಸ್, ಮೊಮ್ಮಕ್ಕಳಾದ ಚಿ। ಅದ್ವಿತೀಯ ಬೆಳ್ಳೆ, ಚಿ। ಆದಾತ್ ಬೆಳ್ಳೆ ಇವರು ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ₹ **5,00,000/-** (ರೂಪ್ಯಾ ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.







Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*

*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*